**ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು**
**ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ವತಿಯಿಂದ**
**'ಮೈಸೂರು ಸಿಟಿ ಅಂತರ ಕಾಲೇಜು ಕಬಡ್ಡಿ ಮಹಿಳಾ ಪಂದ್ಯಾವಳಿ'**

Date: 4-10-2016

2016–17ನೇ ಸಾಲಿನ 'ಮೈಸೂರು ಸಿಟಿ ಅಂತರ ಕಾಲೇಜು ಕಬಡ್ಡಿ ಮಹಿಳಾ ಪಂದ್ಯಾವಳಿ'ಯನ್ನು ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದವತಿಯಿಂದ ಕಾಲೇಜಿ ಕ್ರೀಡಾ ಮೈದಾನದಲ್ಲಿ ನಡೆಸಲಾಯಿತು.



ಬಲೂನ್ ಹಾರಿ ಬಿಡುವ ಮೂಲಕ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಮೈಸೂರು ವಿವಿ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಪಿ.ಕೃಷ್ಣಯ್ಯ, ಕ್ರೀಡಾ ಕೂಟಗಳನ್ನು ಸಾಮಾನ್ಯವಾಗಿ ಕ್ರೀಡಾಂಗಣಗಳಲ್ಲಿ ನಡೆಸಲಾಗುತ್ತದೆ. ಆದರೆ ಇತರೆ ವಿದ್ಯಾರ್ಥಿಗಳಿಗೂ ಕ್ರೀಡಾ ಚಟುವಟಿಕೆಗಳ ಬಗ್ಗೆ ಆಸಕ್ತಿ ಮೂಡಿಸುವ ಉದ್ದೇಶದಿಂದ ಇತ್ತೀಚೆಗೆ ಕಾಲೇಜು ಹಂತದಲ್ಲಿಯೇ ಕ್ರೀಡಾವಳಿಗಳನ್ನು ನಡೆಸಲು ಅವಕಾಶ ಕಲ್ಪಿಸಲಾಗುತ್ತಿದೆ ಎಂದರು.

ಕ್ರೀಡಾ ಚಟುವಟಿಕೆಗಳಿಂದ ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಯಾಗಲಿದೆ. ಮಕ್ಕಳಿಗೆ ಚಿಕ್ಕಂದಿನಿಂದಲೇ ಕ್ರೀಡೆಗಳ ಬಗ್ಗೆ ಆಸಕ್ತಿ ಬೆಳೆಸಬೇಕಾದ ಅಗತ್ಯತೆ ಹೆಚ್ಚಿದೆ. ಆದ್ದರಿಂದ ಆರೋಗ್ಯಕರ ಜೀವನಕ್ಕಾಗಿ ಪ್ರತಿಯೊಬ್ಬರೂ ಕ್ರೀಡಾಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕೆಂದು ಸಲಹೆ ನೀಡಿದರು.

ಜಿಲ್ಲಾ ಪರಿಶಿಷ್ಟ ಪಂಗಡ ಇಲಾಖೆಯ ಸಂಯೋಜನಾಧಿಕಾರಿ ಸಿ.ಶಿವಕುಮಾರ್ ಮಾತನಾಡಿ, ದೇಶದಲ್ಲಿ ವ್ಯಕ್ತಿಗತ ಶ್ರೀಮಂತಿಕೆಯಿರುವುದು ಕ್ರೀಡಾಳುಗಳಿಗೆ ಮಾತ್ರ. ಶಿಸ್ತುಬದ್ಧ ತರಬೇತಿ ಪಡೆದರೆ ಅತ್ಯಂತ ಕಡಿಮೆ ಅವದಿಯಲ್ಲಿ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಳ್ಳಲು ಅವಕಾಶವಿದೆ. ವ್ಯಕ್ತಿ ತನ್ನನ್ನು ತಾನು ಸ್ಪರ್ಧೆಯಲ್ಲಿ ಒಡ್ಡಿಕೊಳ್ಳಲಿಕ್ಕೆ ಕ್ರೀಡಾಚಟುವಟಿಕೆಯಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಕಾಲೇಜು ಪ್ರಾಂಶುಪಾಲ ಡಾ.ಅಣ್ಣೇಗೌಡ ಅಧ್ಯಕ್ಷತೆವಹಿಸಿದ್ದರು. ಎಲ್ಲ ಸಮಿತಿಗಳ ಪ್ರಧಾನ ಸಂಯೋಜಕ ಪ್ರೊ.ಎಂ.ಶಿವಣ್ಣ, ಎಂಸಿಐಸಿಟಿ ಸಂಚಾಲಕ ಪ್ರೊ.ಸುಬ್ರಮಣ್ಯ ಹಾಜರಿದ್ದರು. ಪಂದ್ಯಾವಳಿಯ ಸಂಘಟನಾ ಕಾರ್ಯದರ್ಶಿ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕ ನಾಗಣ್ಣ ಎಂ.ಎಸ್ ಸ್ವಾಗತಿಸಿದರು. ಕು.ಕೋಮಲ ನಿರೂಪಣೆ ಮಾಡಿದರು. ವಿದ್ಯಾರ್ಥಿ ಕಾರ್ಯದರ್ಶಿ ಮೇಘನಾ ಸಿ.ಡಿ.ವಂದಿಸಿದರು. ಕ್ರೀಡಾ ಸಮಿತಿ ಸದಸ್ಯರು ಮತ್ತು ಬೋಧಕ, ಬೋಧಕೇತರರು, ವಿದ್ಯಾರ್ಥಿಗಳು ಹಾಜರಿದ್ದರು.